## ಅದ್ಭುತ ಸಂಗೀತ ಸಾಧನೆ

‘ಅಭಿ ನಾ ಜಾವೊ ಛೋಡಕರ್...’ (ಏ. 30, ಎಸ್. ಸಂಧ್ಯಾರಾಣಿ) ಮುಖಪುಟ ಲೇಖನ ಜೇನುಕಂಠದ ಗಾಯಕಿ ಆಶಾ ಭೋಸ್ಲೆ ಅವರ ಜೀವನದ ಒಳಹೊರಗನ್ನು ಸಮಗ್ರವಾಗಿ ಕಟ್ಟಿಕೊಟ್ಟಿದೆ. ಅವರ ಸಂಗೀತ ಸಾಧನೆಯ ಮೆಟ್ಟಿಲುಗಳು ಅದ್ಭುತ.

—ಭಾರತೀ ಗಂಗಾಧರ್, ಬೆಂಗಳೂರು

## ಜನಮನದಲ್ಲಿ ಚಿರಸ್ಥಾಯಿ

ಜೇನುಕಂಠದ ಗಾಯಕಿಗೆ ನುಡಿನಮನ ಕೊಟ್ಟ ಬರಹ. ಸಂಗೀತ ಲೋಕದಲ್ಲಿ ಜಾದೂ ಮೂಡಿಸಿದ, 12 ಸಾವಿರಕ್ಕೂ ಅಧಿಕ ಗೀತೆಗಳನ್ನು ಹಾಡಿದ, ಗಣ್ಯಾತಿಗಣ್ಯರಿಂದ ಪ್ರಶಂಸೆಗೆ ಒಳಗಾದ, ಪದ್ಮವಿಭೂಷಣ ಸಹಿತ ಹತ್ತು ಹಲವು ಪ್ರಶಸ್ತಿಗಳನ್ನು ತನ್ನ ಮುಡಿಗೇರಿಸಿಕೊಂಡಿದ್ದ ಸ್ವರ ಸಾಮ್ರಾಜ್ಞಿ ಆಶಾ ಭೋಸ್ಲೆ ಅವರು ಜನಮನದಲ್ಲಿ ಎಂದೆಂದಿಗೂ ಚಿರಸ್ಥಾಯಿ.

—ಪಿ. ಜಯವಂತ ಪೈ, ಕುಂದಾಪುರ




## ಹೃದಯ ಮುಟ್ಟುವ ಸಂಗತಿ

ಆಶಾ ಭೋಸ್ಲೆ ಬಗ್ಗೆ ಭಾವನಾತ್ಮಕವಾದ ಬರಹ. ಸುಮಾರು ಐವತ್ತರ ದಶಕದಿಂದ ಆಶಾ ಅವರ ಹಾಡುಗಳನ್ನು ಕೇಳಿರುವವರ ಹೃದಯಕ್ಕೆ ಮುಟ್ಟುತ್ತದೆ.

—ಕೆ.ಸಿ. ರಮೇಶ್, ಬೆಂಗಳೂರು

## ಯಾರೂ ಸರಿಗಟ್ಟಲಾರರು

ದಶಕಗಳ ಕಾಲ ತಮ್ಮ ಗಾಯನದಿಂದ ಸಂಗೀತ ಪ್ರೇಮಿಗಳನ್ನು ತಣಿಸಿದ ಆಶಾ ಅವರ ವಿದಾಯ ವಿಷಾದನೀಯ. ಗೀತೆಗಳ ಭಾವಗಳ ಏರಿಳಿತಕ್ಕೆ ತಕ್ಕಂತೆ ತಮ್ಮ ದನಿಯನ್ನು ಹೊಂದಿಸಿಕೊಳ್ಳುತ್ತಿದ್ದ ಅವರ ಸಾಮರ್ಥ್ಯವನ್ನು ಯಾರೂ ಸರಿಗಟ್ಟಲಾರರು.

—ಪ್ರಭಾಪ್ರಸಾದ್

## ಮನಸ್ಸು ತಟ್ಟಿದ ಬರಹ

‘ನಾಯಿ ಒಂದು ಭಾವ ಹಲವು’ (ಏ. 30, ಪ್ರಸನ್ನ ಪಿ.ಬಿ.) ‘ಯುಗಾದಿ ವಿಶೇಷಾಂಕ 2026 ತೀರ್ಪುಗಾರರು ಮೆಚ್ಚಿದ ಪ್ರಬಂಧ’ ಮನಸ್ಸು ಹೊಕ್ಕಿತು. ಒಮ್ಮೆ ಓದಿದ ಮೇಲೆ ಮನಸ್ಸಿನಲ್ಲಿ ಉಳಿದು ಮತ್ತೆ ಮತ್ತೆ ಯೋಚನೆಗೆ ದೂಡುವ ಶಕ್ತಿ ಇದಕ್ಕಿದೆ.

ನಾವು ಪ್ರತಿದಿನ ನೋಡಿದರೂ ಗಮನಿಸದೇ ಇರುವ ಸ್ವಾರ್ಥ, ನಾಟಕೀಯತೆ ಹಾಗೂ ಮೌಲ್ಯಗಳ ಕುಸಿತವನ್ನು ಬರಹಗಾರರು ತುಂಬಾ ಸೂಕ್ಷ್ಮವಾಗಿ ಮತ್ತು ವ್ಯಂಗ್ಯಮಯವಾಗಿ ಹಿಡಿದಿಟ್ಟಿದ್ದಾರೆ. ಒಂದು ಸರಳ ಘಟನೆಯನ್ನು ಆಧಾರವಾಗಿಸಿಕೊಂಡು, ದೊಡ್ಡ ಸಾಮಾಜಿಕ ಸಂದೇಶ ನೀಡಿರುವುದು ಈ ಲೇಖನದ ಅತ್ಯಂತ ಬಲವಾದ ಅಂಶ. ಚಿತ್ರಗಳು ಲೇಖನಕ್ಕೆ ಮತ್ತಷ್ಟು ಜೀವ ತುಂಬಿವೆ. ಒಂದು ನಾಯಿ ಮತ್ತು ಅದರ ಮಾಲೀಕನ ನಡುವಿನ ಚಿತ್ರಣದ ಮೂಲಕ ಮಾನವ ಸಂಬಂಧಗಳ ವ್ಯತ್ಯಾಸ ಮತ್ತು ಸಮಾಜದ ದ್ವಂದ್ವ ಚರಿತ್ರೆಯನ್ನು ಅಚ್ಚುಕಟ್ಟಾಗಿ ತೋರಿಸಲಾಗಿದೆ.

ಲೇಖನದ ಭಾಷೆ ಸರಳ, ಆದರೆ ಅರ್ಥ ಬಹಳ ಆಳವಾದುದು. ಓದುಗರನ್ನು ಆತ್ಮಪರಿಶೀಲನೆಗೆ ಒಯ್ಯುವ ಶಕ್ತಿ ಈ ಬರಹಕ್ಕಿದೆ. ಇಂತಹ ಲೇಖನಗಳು ಇಂದಿನ ಸಮಾಜಕ್ಕೆ ಅತ್ಯಂತ ಅಗತ್ಯ.

—ಪ್ರಕಾಶ ಸವಡಿ, ಹುಬ್ಬಳ್ಳಿ

## ಅನನ್ಯ ಶ್ವಾನ ಪ್ರೀತಿ

ಸಮಗ್ರ ನಾಯಿ ಪುರಾಣವನ್ನು ಬಿಚ್ಚಿಟ್ಟ ಪರಿ ಯಾವುದೇ ಸ್ವಾಮಿನಿಷ್ಠ ನಾಯಿಗಾದರೂ ಹೆಮ್ಮೆ ಮೂಡಿಸುವಂತಿದೆ. ತಾವು ಬಾಲ್ಯದಿಂದ ಬೆಳೆಸಿಕೊಂಡು ಬಂದ ಅನನ್ಯ ಶ್ವಾನ ಪ್ರೀತಿಯನ್ನು ಮತ್ತು ಅದರಿಂದ ಗಳಿಸಿದ ಸಂತಸದ ಅನುಭವಗಳನ್ನು ವಿವರಿಸಿದ ಬರಹವನ್ನು ತೀರ್ಪುಗಾರರು ಮೆಚ್ಚಿರುವುದರಲ್ಲಿ ಯಾವುದೇ ಅಚ್ಚರಿಯಿಲ್ಲ.

—ವಾಸಣ್ಣ, ಧಾರವಾಡ



## ಮಂದಹಾಸ ಮೂಡಿಸಿತು

‘ಮೂಗು ಇರೋದೇ ತೂರಿಸೋಕೆ!’ (ಏ. 30, ಕೆ.ಪಿ. ಸತ್ಯನಾರಾಯಣ) ಬರಹ, ಹೆಸರಿಗೆ ತಕ್ಕಂತೆ ಮಂದಹಾಸ ಬೀರಿಸಿತು. ಮೂಗು ಉದ್ದವಿರಲಿ, ಗಿಡ್ಡವಿರಲಿ, ಚೂಪಿರಲಿ, ಮೊಂಡಿರಲಿ ಮೂಗು ತೂರಿಸಿದರೆ ಜನ ಗುರುತು ಹಿಡಿಯುತ್ತಾರೆ, ಇಲ್ಲದಿದ್ದರೆ ಕ್ಯಾರೇ ಅನ್ನುವುದಿಲ್ಲ. ತಮ್ಮತನಕ್ಕಾಗಿ ತುರಿಸಿದರು, ತುರಿಸಿಕೊಳ್ಳಲಾರದೆ ಮೂಗು ತೂರಿಸುತ್ತಾರೆ ಎಂಬ ವಾಕ್ಯ ಮನಸೆಳೆಯಿತು. ಎಳೆಎಳೆಯಾಗಿ ವಿಚಾರ ಬಿಡಿಸಿ ಉಣಬಡಿಸಿದ್ದಕ್ಕೆ ನನ್ನ ಮೂಗನ್ನು ತೂರಿಸಿ ಅವರಿಗೆ ಧನ್ಯವಾದ ಹೇಳುತ್ತೇನೆ.



—ಗುರುಲಿಂಗಪ್ಪ ಈ. ಬಿರಾದಾರ, ವಿಜಯಪುರ

## ಮೂಗು ರಂಗೇರಿದರೆ ಅಚ್ಚರಿಯಿಲ್ಲ!

ಸಂಬಂಧವಿರದ ವಿಷಯಗಳಲ್ಲಿ ಅನಗತ್ಯ ಮೂಗು ತೂರಿಸುವುದು ಮಾನವನ ಹುಟ್ಟು ಗುಣವೆನ್ನುವುದು ನಾ ಕಂಡ ವಾಸ್ತವ. ಸಂಬಂಧವಿರದ ವಿಷಯಗಳಲ್ಲಿ ಮೂಗು ತೂರಿಸಿ ಕೆಲವರು ಕೆಂಗಣ್ಣಿಗೆ ಗುರಿಯಾದರೆ, ಮತ್ತೆ ಕೆಲವರು ಅಪಹಾಸ್ಯಕ್ಕೆ ಈಡಾಗುತ್ತಾರೆ.! ಅನಗತ್ಯ ಮೂಗು ತೂರಿಸುವವರು, ಉಚಿತ ಸಲಹೆ ಕೊಡುವವರನ್ನು ಕಂಡರೆ ಕೋಪದಿಂದ ನಮ್ಮ ಮೂಗು ರಂಗೇರಿದರೆ ಅಚ್ಚರಿಯಿಲ್ಲ.

—ಚಂದ್ರಕುಮಾರ್ ಡಿ., ಬೆಂಗಳೂರು

## ಮೌಲ್ಯಯುತ ಧಾರಾವಾಹಿ

ಬಸು ಬೇವಿನಗಿಡದ ಅವರ ‘ನಂಬಿಕೆಯ ನೂಲು’ ಧಾರಾವಾಹಿ ಓದಿ ಸಂತಸವಾಯಿತು.

ಗ್ರಾಮ್ಯ ಜೀವನದ ವಿಷಯವುಳ್ಳ ಈ ಧಾರಾವಾಹಿ ಕೂಡುಕುಟುಂಬ, ವಿಶ್ವಾಸ, ನಂಬುಗೆಯ ಜೀವನ ಮೌಲ್ಯಗಳು ಮತ್ತು ಇಂದು ಹಳ್ಳಿಗಳಲ್ಲಿಯೂ ಮಾಯವಾಗುತ್ತಿರುವ ಸಂಬಂಧಗಳನ್ನು ಪುನರ್ ಸ್ಥಾಪಿಸುವ ಹವಣಿಕೆ, ಇಂಥ ಸಂಗತಿಗಳನ್ನು ಹೊಂದಿ ನಂಬಿಕೆಯ ನೂಲನ್ನು ಗಟ್ಟಿಗೊಳಿಸುತ್ತಿದೆ.

—ಡಿ.ಎಂ. ನದಾಫ್, ಅಫಜಲಪುರ

## ಒಳನೋಟ ನೀಡಿತು

‘ಕಳೆನಾಶ ಮಾಡುವ ರೊಬೋಟ್’ (ಏ. 30, ಶಶಿಕುಮಾರ್ ಸಿ.) ತಂತ್ರಜ್ಞಾನ ಲೇಖನ, ಕಳೆ ನಿರ್ಮೂಲನೆ ಬಗ್ಗೆ ರೈತರು ಪಡುತ್ತಿರುವ ಕಷ್ಟಗಳ ಒಳನೋಟ ನೀಡಿದೆ. ರೋಬೋಗಳ ಬೆಲೆಯ ಬಗ್ಗೆ ಮಾಹಿತಿ ಒದಗಿಸಿದ್ದರೆ ಒಳ್ಳೆಯದಿತ್ತು.

—ನೀಲಕಂಠಪ್ಪ ಚಿಕ್ಕಮುದ್ದೆ ಬೀರೂರು

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in